# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ./ಎಸ್.ಟಿ. ನಂ. 23/2025

ಪ್ರ.ವ.ಬೋ. ದಿನಾಂಕ - 22.04.2026

| | | | |
|---|---|---|---|
| ಸಾಕ್ಷಿದಾರರ ಹೆಸರು | - ರಮೇಶ | ಪ್ರಾ.ಸಾ. | - 06 |
| ತಂದೆಯ ಹೆಸರು | - ಮಲ್ಲಿಕಪ್ಪ | ಚಾ.ಸಾ. | - 06 |
| ವಯಸ್ಸು | - 23 ವರ್ಷ | | |
| ಉದ್ಯೋಗ | - ಕೂಲಿ ಕೆಲಸ | | |
| ವಾಸ ಸ್ಥಳ | - ರಾಮಘಟ್ಟ ಗ್ರಾಮ, ಹೊಳಲ್ಕೆರೆ ತಾ. | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದ -**

ಚಾಸಾ-1 ರವರು ನನಗೆ ಗೊತ್ತು. ಮೃತ ಆಶಾ ನನಗೆ ಗೊತ್ತು. ಆಶಾ ಎಲ್ಲಿ, ಹೇಗೆ ಮೃತ ಪಟ್ಟಳು ಎಂದು ನನಗೆ ಗೊತ್ತಿಲ್ಲ. ಅವಳಿಗೆ ಯಾರು ಕೊಲೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಮನೆಯಲ್ಲಿ ಇದ್ದಾಗ ನಮ್ಮ ತಾಯಿ ಆಶಾ ಕೆಂಗುಟ್ಟೆಯಲ್ಲಿ ತೀರಿಕೊಂಡ ವಿಷಯ ತಿಳಿಸಿರುತ್ತಾರೆ. ನಂತರ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ಪೋಲಿಸರು ನನ್ನ ಸಹಿ ಪಡೆದಿರುತ್ತಾರೆ . ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

ಮೃತ ಆಶಾ ನನ್ನ ತಂಗಿ. ಚಾಸಾ-1 ನನ್ನ ತಾಯಿ. ನನ್ನ ತಂದೆ ತಾಯಿಗೆ ನಾವು 5 ಜನ ಮಕ್ಕಳು. ನಾನು ಚನ್ನಪಟ್ಟಣ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ. ಆಶಾ ಇವಳ ಮದುವೆಯನ್ನು ಚನ್ನಗಿರಿಯ ಮಧು ಇವರ ಜೊತೆ ಮಾಡಿಕೊಟ್ಟಿದ್ದೆವು. ಮದುವೆಯಾದ ನಂತರ ಆಶಾ ತವರು ಮನೆಯಲ್ಲಿ ವಾಸವಿದ್ದಳು. ಆಶಾ ಹೊಳಲ್ಕೆರೆಯ ಶಾಲಾ ಬಸ್ ನಲ್ಲಿ ಆಯಾ ಆಗಿ ಕೆಲಸಕ್ಕೆ ಹೋಗುತ್ತಿದ್ದಳು. 1 ವರ್ಷದ ಹಿಂದೆ ಚಾಸಾ-1 ನನಗೆ ಪೋನ್ ಮಾಡಿ, ಆಶಾ ತೀರಿಕೊಂಡಿದ್ದಾಳೆ ಬಾ ಎಂದು ತಿಳಿಸಿರುತ್ತಾರೆ. ನಾನು ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ಅವಳ ಮೃತ ದೇಹವನ್ನು ನಾನು ನೋಡಿರುವುದಿಲ್ಲ. ಯಾವ ವಿಚಾರವಾಗಿ ಅವಳು

ಮೃತ ಪಟ್ಟಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಅವಳನ್ನು ಯಾರು ಕೊಲೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಚಾಸಾ–1 ರವರನ್ನು ವಿಚಾರಿಸಿಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ.

(ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು. )

**ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ**

ದಿಃ 14.04.2025 ರಂದು ರಾತ್ರಿ 8.00 ಗಂಟೆಗೆ ಆಶಾ ಫೋನ್‌ನಲ್ಲಿ ಮಾತನಾಡುತ್ತಾ ಮನೆಯಿದ ಹೊರಗೆ ಹೋದವಳು ತಡ ರಾತ್ರಿಯಾದರೂ ಮನೆಗೆ ಬರಲಿಲ್ಲ, ಮಾರನೇ ದಿನ ದಿಃ 15.04.2025 ರಂದು ಬೆಳಗ್ಗೆ 10.00 ಗಂಟೆಗೆ ನಾನು ಮನೆಯಲ್ಲಿ ಇದ್ದಾಗ ಕೆಂಗುಟ್ಟೆ ಹಾಗೂ ದಾಸಿಕಟ್ಟೆ ಗ್ರಾಮಗಳ ಟಾರ್ ರಸ್ತೆಯ ಸಮೀಪ ಸರ್ಕಾರಿ ಗೋಮಾಳ ಜಾಗದಲ್ಲಿ ಆಶಾಳನ್ನು ಕೊಲೆ ಮಾಡಿದ್ದಾರೆ ಎಂದು ನಮ್ಮ ಊರಿನ ಜನರು ಮಾತನಾಡುತ್ತಿದ್ದನ್ನು ಗಮನಿಸಿ ನಾನು ಅಲ್ಲಿ ಹೋಗಿ ನೋಡಿದಾಗ ಆಶಾಳ ತಲೆಗೆ ಕಲ್ಲಿನಿಂದ ಯಾರೋ ದುರ್ಷ್ಕರ್ಮಿಗಳು ಹೊಡೆದು ಕೊಲೆ ಮಾಡಿದ್ದು, ನಂತರ ಗೊತ್ತಾಗಿದ್ದು, ಆರೋಪಿ ಮತ್ತು ಆಶಾಳ ನಡುವೆ ಹಣದ ವ್ಯವಹಾರ ಇದ್ದು, ಆಶಾಳು ಆರೋಪಿಗೆ ಹಣ ವಾಪಸ್ಸು ಕೇಳಿದ್ದಕ್ಕೆ ಕೊಲೆ ಮಾಡಿರುವ ಬಗ್ಗೆ ಗೊತ್ತಾಯಿತು ಎಂದು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆ ಭಾಗವನ್ನು ನಿಪಿ–5 ಎಂದು ಗುರುತಿಸಲಾಯಿತು. ನಿಪಿ–5 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಡಿ.ಎಂ.ಬಿ. ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.